ಮನದಟ್ಟು ಮಾಡಿಸಿ ಅವುಗಳ ಬಗ್ಗೆ ಪಾಪಪ್ರಜ್ಞೆ ಮೂಡಿಸುವಂತೆ ಮಾಡುವುದಿಲ್ಲ, ಬದಲಿಗೆ ವ್ಯಕ್ತಿಯೋರ್ವ/ಳು ಆ ಗತವನ್ನು ಹೇಗೆ ನೆನಪಿಸಿಕೊಳ್ಳುತ್ತಾರೆ ಮತ್ತು ನೆನಪಿಸಿಕೊಳ್ಳುವ ಆ ಪ್ರಕ್ರಿಯೆಯಲ್ಲಿ ಇತಿಹಾಸ ಹೇಗೆ ನಿರಚನಗೊಳ್ಳುತ್ತಾ ವರ್ತಮಾನಕ್ಕೆ ಸಂವಾದಿಯಾಗುತ್ತದೆ ಎನ್ನುವುದನ್ನು ಬಿಡಿಸಿಡುತ್ತವೆ; ಸಾಮೂಹಿಕ ಇತಿಹಾಸವನ್ನು ಒಡೆದು ವೈಯುಕ್ತಿಕ ನೆನಪುಗಳ ಮೂಲಕ ಇತಿಹಾಸವನ್ನು ಅಪರಿಚಿತಗೊಳಿಸುತ್ತವೆ.

ಸಾಮಾಜಿಕ ತಾರತಮ್ಯ, ಶೋಷಣೆಗಳ ಬಗ್ಗೆ ಎಚ್ಚರ ವಹಿಸಿ ಬರೆಯುವ ಇಶಿಗಾರೊ **Downtown Abbey** ಎಂಬ ಟೀವಿ ಬರಹದಲ್ಲಿ ಇಂಗ್ಲೆಂಡ್‌ನ ವರ್ಗ ವ್ಯವಸ್ಥೆಯಿಂದ ನಲುಗುವ ಯುವ ಜನಾಂಗದ ಚಿತ್ರವನ್ನು ನೀಡಿ, ತಾನು ಬದುಕುತ್ತಿರುವ ಕಾಲ ದೇಶಗಳನ್ನು ಚಿಕಿತ್ಸೆಗೊಳಪಡಿಸಲು ಬಯಸುತ್ತಾನೆ. ಮಹಾಯುದ್ಧಗಳ ನಂತರದ ಕಾಲಘಟ್ಟದಲ್ಲಿ ಬದುಕುತ್ತಿರುವ ನಮಗೆ ಯುದ್ಧದ ಕರಾಳತೆಯನ್ನು ನೆನಪಿಸಿಕೊಂಡು ವರ್ತಮಾನವನ್ನು ಕಾಪಿಡುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ ಎನ್ನುತ್ತಾನೆ. ಹೀಗೆ ಇತಿಹಾಸ ವರ್ತಮಾನಗಳನ್ನು ಬೆಸೆದು ಸಾಮಾಜಿಕ ಜವಾಬ್ದಾರಿಯುಳ್ಳ ಲೇಖಕನಾಗಿ ಮುಂದಿನ ಜನಾಂಗಕ್ಕಾಗಿ ಬರೆಯುವವನಂತೆ ತೋರುವ ಈ ಇಶಿಗಾರೊ ತನ್ನ ಬರಹದ ಮೇಲೆ ಯಾವೊಬ್ಬ ಬರಹಗಾರನ ಪ್ರಭಾವವಿಲ್ಲ ಎಂದು ಘೋಷಿಸುತ್ತಾನೆ. ಸಾಹಿತ್ಯೇತರ ಬರಹಗಳೇ ತನ್ನನ್ನು ಪ್ರಭಾವಿಸಿವೆ ಎನ್ನುತ್ತಾ ಹಳೆಯ ಸಿನಿಮಾಗಳು, ಟೀವಿ ಶೋಗಳು ತನ್ನನ್ನು ಕಾದಂಬರಿ ರಚಿಸಲು ಉತ್ತೇಜಿಸುತ್ತವೆ ಎನ್ನುತ್ತಾನೆ.

ರಷ್ಯಾದ ಕಾದಂಬರಿಕಾರ ದಾಸ್ತೊವಸ್ಕಿಯ ಅಭಿಮಾನಿಯಾಗಿದ್ದರೂ ತನ್ನ ಬರವಣಿಗೆಯಲ್ಲಿ ಆತನ ನೆರಳಿಲ್ಲ ಎನ್ನುತ್ತಾ ಹೆನ್ರಿ ಜೇಮ್ಸ್ ಮತ್ತು ಜೇನ್ ಆಸ್ಟಿನ್‌ರ ಕುರುಹುಗಳನ್ನು ತನ್ನ ಬರವಣಿಗೆಯಲ್ಲಿ ಕಾಣಬಹುದು ಎನ್ನುವ ಕೆಲವು ವಿಮರ್ಶಕರ ನಿಲುವಿಗೆ ನಗುತ್ತಾನೆ. ನಕ್ಕು, ಅದನ್ನು ಅಲ್ಲಗೆಳೆಯುತ್ತಾ ಆ ಇಬ್ಬರು ಲೇಖಕರು ಎಂದೆಂದಿಗೂ ನನ್ನ ಇಷ್ಟದ ಲೇಖಕರಾಗಿದ್ದಿಲ್ಲ ಎನ್ನುತ್ತಾನೆ.

ಈ ಸಮಕಾಲೀನ ಸಂದರ್ಭದಲ್ಲೂ ಮಾನವ ಜಗತ್ತಿನ ಸಂಪೂರ್ಣ ಅಭಿವ್ಯಕ್ತಿ ಸಾಧ್ಯವಾಗಿರುವುದು ಕಾದಂಬರಿ ಪ್ರಕಾರದಿಂದ ಮಾತ್ರ ಎನ್ನುವ ಈತ ಬರೆದಿರುವುದು ಏಳು ಕಾದಂಬರಿಗಳು. ಮನುಷ್ಯರ ಹೊರ ಮತ್ತು ಒಳ ಜಗತ್ತಿನ ಪದರುಗಳನ್ನು ದಟ್ಟವಾಗಿ, ಆಳವಾಗಿ ನೀಡುವ ಏಕೈಕ ಕಲಾಪ್ರಕಾರ ಕಾದಂಬರಿ ಮಾತ್ರವೇ ಎನ್ನುವ ಈತನ ಮೊದಲ ಬರವಣಿಗೆ ಒಂದು ರೇಡಿಯೊ ನಾಟಕ!

ಜಪಾನ್‌ನ ಹೊರಗೆ ಬೆಳೆದು ತನ್ನ ಪೋಷಕರ ಮೂಲಕ ತಾನು ಹುಟ್ಟಿದ ದೇಶವನ್ನು ಕಲ್ಪಿಸಿಕೊಳ್ಳುವ, ಕಲ್ಪಿಸಿಕೊಂಡು ತನ್ನವರು ಅನುಭವಿಸಿದ ದುಃಖ ದುಮ್ಮಾನಗಳನ್ನು ಆಸೆ ಕನಸು ಉನ್ನತಿಗಳನ್ನು ಬರೆದ ಇಶಿಗಾರೊ ನನ್ನನ್ನು ವೈಯುಕ್ತಿಕವಾಗಿ ಕಾಡಿದ್ದು ಕಡಿಮೆಯೇ. ಜಪಾನ್, ಅರೆಬಿಕ್ ಮತ್ತು ಸ್ಪ್ಯಾನಿಷ್ ಸಾಹಿತ್ಯಗಳ ಒಂದು ಬರಹವನ್ನಾದರೂ ಪ್ರತಿವಾರ ಚಾಚೂ ತಪ್ಪದೆ ಓದುವ ನನಗೆ ಇಶಿಗಾರೊನಿಗಿಂತ ಜಪಾನಿನ ಕವಾಬಟ, ಕೊಬೊ ಅಬೆ ಮತ್ತು ಹರೂಕಿ ಮುರಕಾಮಿ ತೀವ್ರವಾಗಿ ಕಾಡುತ್ತಾರೆ. ಜಪಾನೀ ಭಾಷೆಯಲ್ಲೇ ಬರೆಯುವ ಈ ಮೂವರಷ್ಟು ಅದರಲ್ಲೂ ಕವಾಬಟ, ಕೊಬೊ ಅಬೆಯರಷ್ಟು ಈತ ವ್ಯಕ್ತಿಯ ಒಳಗಿನ ಮತ್ತು ಹೊರಗಿನ ಒತ್ತಡಗಳ ಸಂಘರ್ಷವನ್ನು ಗಾಢವಾಗಿ ಚಿತ್ರಿಸುವುದಿಲ್ಲವೇನೊ ಎನ್ನುವ ಅನುಮಾನ ನನ್ನದು. ಇಶಿಗಾರೊನನ್ನು ಪೂರ್ಣವಾಗಿ ಓದಿದರೆ ಬಹುಶಃ ನನ್ನ ಅನಿಸಿಕೆ ಬದಲಾಗಬಹುದೇನೊ!